ಬೀದರ್ ಜಿಲ್ಲೆಯಲ್ಲಿ 2006–07ನೇ ಸಾಲಿನಿಂದ 2008–09ನೇ ಸಾಲಿನವರೆಗೆ ಹನಿ ನೀರಾವರಿ ಯೋಜನೆಯಡಿ ಸಹಾಯಧನ ನೀಡಿದ ವಿವರ

		1.ಬೀದರ್		2.ಔರಾದ್		3.ಬಾಲ್ಕಿ		4.ಹುಮನಾಬಾದ್		5.ಬಸವ ಕಲ್ಯಾಣ		ಒಟ್ಟು	
		ಫಲಾನುಭವಿಗಳ ಸಂಖ್ಯೆ	ಮೊತ್ತ	ಫಲಾನುಭವಿಗಳ ಸಂಖ್ಯೆ	ಮೊತ್ತ	ಫಲಾನುಭವಿಗಳ ಸಂಖ್ಯೆ	ಮೊತ್ತ	ಫಲಾನುಭವಿಗಳ ಸಂಖ್ಯೆ	ಮೊತ್ತ	ಫಲಾನುಭವಿಗಳ ಸಂಖ್ಯೆ	ಮೊತ್ತ	ಫಲಾನುಭವಿಗಳ ಸಂಖ್ಯೆ	ಮೊತ್ತ
A.	2006–07	54	1571726	13	427684	35	1021126	26	807837	29	897531	157	4725904
B.	2007–08		–	29	641654	28	255087	–	–		694870	57	1591611
C.	2008–09	45	1367316	11	493690	43	1414156	54	1238390	46	1383355	199	5896907
		99	2939042	53	1563028	106	2690369	80	2046227	75	2975756	413	12214422

291 ಶ್ರೀ ಜಯಚಂದ್ರ ಟಿ.ಬಿ.
ಕೃಷಿ ಸಚಿವರು

ಅ) ರಾಜ್ಯದಲ್ಲಿ ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೆ ಹಾಲಿ ಚಾಲ್ತಿ ಇರುವ ವಿಮಾ ಯೋಜನೆಗಳು ಯಾವುವು;

ರಾಜ್ಯದಲ್ಲಿ ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೆ ಹಾಲಿ ಚಾಲ್ತಿ ಇರುವ ಬೆಳೆ ವಿಮಾ ಯೋಜನೆಗಳು ಯಾವುವೆಂದರೆ;

1) ರಾಷ್ಟ್ರೀಯ ಕೃಷಿ ವಿಮಾ ಯೋಜನೆ
2) ಪ್ರಾಯೋಗಿಕ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆ

ಅ) 2007–08 ಮತ್ತು 2008–09ನೇ ಸಾಲಿಗೆ ಈ ಯೋಜನೆಗಳಿಂದ ಸಾಲ ಪಡೆದ ಹಾಗೂ ಪಡೆಯದೇ ಇರುವ ಫಲಾನುಭವಿಗಳ ಸಂಖ್ಯೆ ಎಷ್ಟು;

2007–08 ಮತ್ತು 2008–09ನೇ ಸಾಲಿನಲ್ಲಿ ಯೋಜನೆಗಳಿಂದ ಸಾಲ ಪಡೆದ ಹಾಗೂ ಸಾಲ ಪಡೆಯದೇ ಇರುವ ಫಲಾನುಭವಿಗಳ ಸಂಖ್ಯೆ ಕೆಳಕಂಡಂತಿದೆ.

(ರೈತರ ಸಂಖ್ಯೆ)

ರಾಷ್ಟ್ರೀಯ ಕೃಷಿ ವಿಮಾ ಯೋಜನೆ			
ವರ್ಷ	ಸಾಲ ಪಡೆದ ರೈತರು	ಸಾಲ ಪಡೆಯದ ರೈತರು	ಒಟ್ಟು
2007–08	34931	31535	66466
2008 ಮುಂಗಾರು	101419	213860	315279

ಪ್ರಾಯೋಗಿಕ ಹವಾಮಾನ ಆಧಾರಿತ ಬೆಳೆ ವಿಮಾಯೋಜನೆ

ವರ್ಷ	ಸಾಲ ಪಡೆದ ರೈತರು	ಸಾಲ ಪಡೆಯದ ರೈತರು	ಒಟ್ಟು
2007 ಮುಂಗಾರು	29678	5597	35275
2008 ಮುಂಗಾರು	18344	1743	20087

2008–09ನೇ ಸಾಲಿನ ಹಿಂಗಾರು ಮತ್ತು ಬೇಸಿಗೆ ಹಂಗಾಮಿನ ರಾಷ್ಟ್ರೀಯ ಕೃಷಿ ವಿಮಾ ಯೋಜನೆಯಡಿ ಇಳುವರಿ ಮಾಹಿತಿ ನೀಡಲು ಕೊನೆಯ ದಿನಾಂಕ:31–8–2009 ಆಗಿದ್ದು ಮಾಹಿತಿ ನೀಡಿದ ನಂತರ ವಿಮಾ ಸಂಸ್ಥೆಯು ಬೆಳೆ ವಿಮಾ ನಷ್ಟ ಪರಿಹಾರ ಲೆಕ್ಕಹಾಕಿ ಇತ್ಯರ್ಥಪಡಿಸುತ್ತದೆ. ಸದರಿ ಹಂಗಾಮಿನಲ್ಲಿ ಪ್ರಾಯೋಗಿಕ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯಡಿಯಲ್ಲಿ ವಿಮಾ ಸಂಸ್ಥೆಯು ಶೀಘ್ರದಲ್ಲೆ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲಿದೆ.

ಇ) ಈ ಯೋಜನೆಗಾಗಿ ಬಿಡುಗಡೆಯಾದ ಹಣವೆಷ್ಟು;

ರಾಜ್ಯ ಸರ್ಕಾರದಿಂದ ಈ ಎರಡೂ ಸಾಲಿನಲ್ಲಿ ಬಿಡುಗಡೆಯಾದ ಹಣ ಈ ಕೆಳಕಂಡಂತಿದೆ.

(ಆರ್ಥಿಕ: ಲಕ್ಷ ರೂ.ಗಳಲ್ಲಿ)

ಯೋಜನೆ	2007–08	2008–09
ರಾಷ್ಟ್ರೀಯ ಕೃಷಿ ವಿಮಾ ಯೋಜನೆ	8728.68	1833.61
ಪ್ರಾಯೋಗಿಕ ಹವಾಮಾನ ಆಧಾರಿತ	315.35	190.54

ಬೆಳೆ ವಿಮಾ ಯೋಜನೆ		
ಒಟ್ಟು:	9044.03	2024.15

ಕೇಂದ್ರ ಸರ್ಕಾರದಿಂದ ಸಮ ಪ್ರಮಾಣದಲ್ಲಿ ವಿಮಾ ಸಂಸ್ಥೆಗೆ ನೇರವಾಗಿ ಹಣ ಬಿಡುಗಡೆಯಾಗಿರುತ್ತದೆ.

ಈ) ವಿಮಾ ಯೋಜನೆಗೆ ತಾಲ್ಲೂಕಿನಿಂದ ಹೋಬಳಿಗೆ ಘಟಕವನ್ನಾಗಿ ಆಧರಿಸುವ ಚಿಂತನೆ ಸರ್ಕಾರದ ಮುಂದಿದೆಯೇ;

ರಾಷ್ಟ್ರೀಯ ಕೃಷಿ ವಿಮಾ ಯೋಜನೆ ಹಾಗೂ ಪ್ರಾಯೋಗಿಕ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಗಳಲ್ಲಿ ಈಗಾಗಲೇ ರಾಜ್ಯ ಸರ್ಕಾರವು ಹೋಬಳಿ ಘಟಕವನ್ನಾಗಿ ಆಧರಿಸಿ ಅಧಿಸೂಚನೆಗಳನ್ನು ಹೊರಡಿಸಿರುತ್ತದೆ.

ಉ) ಬೇರೆ ಬೇರೆ ರಾಜ್ಯಗಳಲ್ಲಿರುವ ಹಾಗೂ ರಾಜ್ಯದಲ್ಲಿರುವ ವಿಮಾ ಯೋಜನೆಗಳಿಗೆ ಇರುವ ವ್ಯತ್ಯಾಸವೇನು;

ಈ ಎರಡೂ ಯೋಜನೆಗಳು ಕೇಂದ್ರ ಸರ್ಕಾರದ ಯೋಜನೆಗಳಾಗಿದ್ದು, ನಮ್ಮ ರಾಜ್ಯದಲ್ಲಿ ಹಾಗೂ ಇತರೆ ರಾಜ್ಯಗಳಲ್ಲಿ ಅನುಷ್ಠಾನಗೊಳಿಸುವಲ್ಲಿ ಯಾವುದೇ ವ್ಯತ್ಯಾಸ ಇರುವುದಿಲ್ಲ.

ಊ) ಈ ವಿಮಾ ಯೋಜನೆಗಳಿಂದ ರೈತರು ಹೆಚ್ಚಿನ ಸಹಕಾರಿಯಾಗಲು ಯಾವುದಾದರೂ ಕಾರ್ಯಕ್ರಮ ರೂಪಿಸಲಾಗಿದೆಯೇ?

ಕೇಂದ್ರ ಸರ್ಕಾರವು ರಚಿಸಿರುವ ಮಾರ್ಗಸೂಚಿಯಂತೆ ಈ ಎರಡೂ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಹೆಚ್ಚಿನ ಸಂಖ್ಯೆಯಲ್ಲಿ ರೈತರು ಭಾಗವಹಿಸಲು ಅನುವಾಗುವಂತೆ ಹೆಚ್ಚಿನ ಪ್ರಚಾರ ಕಾರ್ಯ ಕೈಗೊಳ್ಳಲಾಗುತ್ತಿದೆ.

292 ಶ್ರೀ ಜಯಚಂದ್ರ ಟಿ.ಬಿ.
ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು

1 ತುಮಕೂರು ಜಿಲ್ಲೆಯ ಶಿರಾ ಮತ್ತು ಅಕ್ಕಪಕ್ಕ ತಾಲ್ಲೂಕುಗಳಲ್ಲಿ ಪುಷ್ಪೋದ್ಯಮಕ್ಕೆ ಒತ್ತು ನೀಡಲು ಸ್ಥಾಪಿಸುತ್ತಿರುವ ಹೂವುಗಳ ಹರಾಜು ಕೇಂದ್ರಕ್ಕೆ ಇದುವರೆಗೂ ಬಿಡುಗಡೆ ಮಾಡಿದ ಹಣವೆಷ್ಟು?

ರೂ.200.00 ಲಕ್ಷಗಳು

2 ಹಾಗಿದ್ದಲ್ಲಿ ಹರಾಜು ಕೇಂದ್ರವನ್ನು ಯಾವಾಗ ಪ್ರಾರಂಭಿಸಲಾಗುವುದು?

ಈ ಉದ್ದೇಶಕ್ಕಾಗಿ ಕೃಷಿ ಇಲಾಖೆಯಿಂದ 2 ಎಕರೆ ಜಮೀನನ್ನು ಪಡೆಯಲಾಗಿದೆ. ಯೋಜನೆಯ ಅನುಷ್ಠಾನ ಹಾಗೂ ನಿರ್ವಹಣೆಗೆ ಸಲಹೆಗಾರರನ್ನು ನೇಮಿಸಿಕೊಳ್ಳಲಾಗಿದೆ. ಸಲಹೆಗಾರರು ಟೆಂಡರ್ ದಾಖಲಾತಿಗಳನ್ನು ಸಿದ್ಧಪಡಿಸುತ್ತಿದ್ದಾರೆ. ಕಾಮಗಾರಿಯ ಕೆಲಸವನ್ನು ಅತಿ ಶೀಘ್ರದಲ್ಲಿ